ಎಚ್. ಡುಂಡಿರಾಜ್

# ಮಕ್ಕಳ ಕವಿತೆಗಳು

## ಬಂದವರು ಯಾರು?

ಒಂದೂರಿನ ಒಂದು ಮನೆಯಲ್ಲಿ ಇತ್ತು ಒಂದು ಒಂದು
ಆಮೇಲೆ ಸೇರಿತು ಎರಡು ಎಲ್ಲಿಂದಲೋ ಓಡಿ ಬಂದು

ಒಂದು ಎರಡು ಕೂಡಿಕೊಂಡು ಆಡಿಕೊಂಡು ಇರಲು
ಬಡಿಯಿತು ಮೂರು ಬಾಗಿಲು ಮನೆಯೊಳಗೆ ಬರಲು

ಸರಿ ಅದನ್ನೂ ಸೇರಿಸಿಕೊಂಡು ಆಯಿತು ಒಟ್ಟು ಮೂರು
ಅನ್ನುವಷ್ಟರಲ್ಲಿ ಪುನಃ ಟಕ ಟಕ ಬಂದವರು ಯಾರು?

ಹೇಳದೆ ಕೇಳದೆ ಬರ್ತಾರಪ್ಪ ಎಂದು ಮನಸ್ಸಲ್ಲೆ ಬೈದು
ನೋಡಿದರೆ ಬಂದಿತ್ತು ನಾಲ್ಕು ಜತೆಗದರ ಗೆಳತಿ ಐದು

ಒಂದು ಬಾಗಿಲು ತೆರೆದು ಹಲ್ಕಿರಿದು ಅಂತು ಬನ್ನಿ ಬನ್ನಿ
ಐದು ತಂದಿತ್ತು ಆರು ಕಿತ್ತಳೆ ಹೇಳಿತು ತಗೊಳ್ಳಿ ತಿನ್ನಿ

ತಿನ್ನುವಾಗ ಬಂದರು ಇನ್ನೂ ಇಬ್ಬರು ಏಳು ಮತ್ತು ಎಂಟು
ಒಂದು ಕೇಳಿತು ''ನೀವೂ ಬಂದಿರಾ? ಒಂಬತ್ತು ಎಲ್ಲುಂಟು?''

ಏಳು ಹೇಳಿತು ''ಓಡಿ ಬರ್ತಾ ಇತ್ತು. ಕಾಲು ಜಾರಿ ಬಿತ್ತು.
ಅದನ್ನು ಎತ್ತಿಕೊಂಡು ಅಲ್ನೋಡಿ ಬರ್ತಾ ಇದೆ ಹತ್ತು!''



ಕಲೆ: ಅಪಾರ